**<u>ಹೆಚ್ಚುವರಿ  ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ</u>**
**<u>ಚಿಂಚೋಳಿ</u>**

**ಸಿ.ಸಿ. ನಂ. 1049/2022**

| | | | |
|---|---|---|---|
| **ಹೆಸರು** | **:** | **ಭದ್ರಯ್ಯಾ** | **ದೋ.ಸಾ. 3** |
| **ತಂದೆಯ ಹೆಸರು** | **:** | **ಬನ್ನಯ್ಯಾ** | **ಪ್ರಾ.ಸಾ. 1** |
| **ವಯಸ್ಸು** | **:** | **48 ವರ್ಷ** | **ದಿನಾಂಕಃ 09-08-2023** |
| **ಉದ್ಯೋಗ** | **:** | **ವ್ಯವಸಾಯ** | |
| **ವಾಸಸ್ಥಳ** | **:** | **ಚಿಕ್ಕಲಿಂಗದಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1, ಚಾಸಾ-2 ಹಾಗೂ ಚಾಸಾ-4 ರವರು ನನಗೆ ಗೊತ್ತು. ಶ್ರೀಕಾಂತರವರು ಮೃತಪಟ್ಟಿರುತ್ತಾರೆ. ಈಗ ನೋಡುತಿರುವ  ಶವ ಪಂಚನಾಮೆಯಲ್ಲಿ  ನನ್ನ ಸಹಿ ಇದೆ.  ಸದರಿ ಶವಮಹಜರ ಪಂಚನಾವೆಯನ್ನು ನಿಪಿ-1 ಎಂದು ಮತ್ತು  ಎಂದು ಮತ್ತು ಅದರಲ್ಲಿರುವ ಸಾಕ್ಷಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

ಈಗ್ಗೆ ಒಂದುವರೆ ವರ್ಷಗಳ ಹಿಂದೆ ಚಿಂಚೋಳಿ ಸರಕಾರಿ ಆಸ್ಪತ್ರೆಯಲ್ಲಿ ನಿಪಿ-1 ರ ಮೇಲೆ ಸಹಿ ಮಾಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 9.00 ಗಂಟೆ ಆಗಿತ್ತು.  ಶ್ರೀಕಾಂತರವರು ಮೃತಪಟ್ಟ ಕಾರಣ ನಿಪಿ-1 ರಲ್ಲಿ ಸಹಿ ಮಾಡಿರುತ್ತೇನೆ.ಈಗ ನೋಡುತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2  ಎಂದು ಗುರುತಿಸಲಾಯಿತು.   ಈಗ ನೋಡುತಿರುವ ಇನ್ನೊಂದು ಭಾವಚಿತ್ರದಲ್ಲಿ ಮೃತ ಶ್ರೀಕಾಂತ ಇರುತಾನೆ. ಸದರಿ ಭಾವ ಚಿತ್ರವನ್ನು  ನಿಪಿ-3 ಎಂದು ಗುರುತಿಸಲಾಯಿತು.  ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ಶವ ಪರೀಕ್ಷೆ ಮಾಡುವ ಸಮಯಕ್ಕೆ ಆಸ್ಪತ್ರೆಯಲ್ಲಿ ಪಡೆದುಕೊಳ್ಳಲಾಗಿದೆ.

ಈಗ ನೋಡುತರುವ ದಾಖಲೆಯಲ್ಲಿರುವ ಸಹಿ ನನ್ನದೆ ಸದರಿ ದಾಖಲೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ-4 ಎಂದು ಮತ್ತು ಅದರಲಿರುವ ಸಾಕ್ಷಿಯ ಸಹಿಯನ್ನು ನಿಪಿ-4

(ಎ) ಎಂದು ಗುರುತಿಸಲಾಯಿತು. ಈಗ ಒಂದುವರೆ ವರ್ಷಗಳ ಹಿಂದೆ ಬೆಳಿಗ್ಗೆ 9.00 ಗಂಟೆ ಸುಮಾರಿಗೆ ಸುಲೆಪೇಟ ಸೇಂಡ ರಸ್ತೆಯ ಹತ್ತಿರದಲ್ಲಿರುವ ಧಾಭಾ ಹತ್ತಿರ ಸಹಿ ಮಾಡಿರುತ್ತೇನೆ. ಲಾರಿ ಮತ್ತು ಆಟೋ ರೀಕ್ಷಾ ಡಿಕ್ಕಿಯಾದ ಕಾರಣ ಪಂಚನಾಮೆಯಲ್ಲಿ ಸಹಿ ಮಾಡಿದ್ದೇನೆ. ಈಗ ನೋಡುತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ರ ಭಾವಚಿತ್ರವನ್ನು ಘಟನಾ ಸ್ಥ,ಳದಲ್ಲಿ ಪಂಚನಾಮೆ ಕಾಲಕ್ಕೆ ಪಡೆದುಕೊಳ್ಳಲಾಯಿತು.

ಈಗ ನೋಡುತಿರುವ ಇನ್ನೊಂದು ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆ ಜಪ್ತಿ ಪಂಚನಾಮೆಯಾಗಿದ್ದು ಅದನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿರುವ ಸಹಿ ಸುಲೆಪೇಟ ಪೊಲೀಸ ಠಾಣೆಯಲ್ಲಿ ಲಾರಿ ಮತ್ತು ಆಟೋ ಜಪ್ತಿ ಮಾಡುವ ಸಮಯಕ್ಕೆ ಸಹಿ ಮಾಡಿದ್ದೇನೆ. ಈಗ ನೋಡುತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿರುವ ಲಾರಿ ಮತ್ತು ಆಟೋವನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದರು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಯಾವದೇ ಕಾರಣ ಇಲ್ಲದ ಸಮಯ ಕೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**